<u>ದಿನಾಂಕ **11.02.2026** ರಂದು ಡಿ.ಡಬ್ಲ್ಯು-**1** ರವರನ್ನು ಪುನಃ ಕರೆಯಿಸಿ ಪ್ರಮಾಣ ವಚನ ಭೋದಿಸಲಾಯಿತು.</u>

<u>ಪಾಟೀ ಸವಾಲುಃ ಫಿರ್ಯಾದುದಾರರ ಪರ ಶ್ರೀ.ಸಿ ಪಿ ಬಿ ವಕೀಲರಿಂದಃ-</u>

1. ದಿನಾಂಕ 02.03.2023 ರಂದು ಫಿರ್ಯಾದುದಾರರು ನನಗೆ ಲೀಗಲ್ ನೋಟೀಸ್ ಕಳುಹಿಸಿರುತ್ತಾರೆ ಎಂದರೆ ಸರಿಯಲ್ಲ. ಸದರಿ ನೋಟೀಸು ನನಗೆ ದಿನಾಂಕ 04.03.2023 ರಂದು ತಲುಪಿರುತ್ತದೆ ಎಂದರೆ ಸರಿಯಲ್ಲ. ಈಗ ಸಾಕ್ಷಿಗೆ ಫಿರ್ಯಾದುದಾರರ ಪರ ವಕೀಲರು ನಿಪಿ-**5** ಅಂಚೆ ಸ್ವೀಕೃತಿ ಪತ್ರ ತೋರಿಸಲಾಗಿ**,** ಸಾಕ್ಷಿಯು ಸದರಿ ದಾಖಲೆ ಮೇಲಿರುವ ತನ್ನ ಸಹಿಯನ್ನು ನೋಡಿ ಗುರುತಿಸಿರುವುದರಿಂದ**,** ಸದರಿ ಸಹಿಯನ್ನು ನಿಪಿ-**5(ಎ)** ಎಂದು ಗುರುತಿಸಲಾಯಿತು**.** ಫಿರ್ಯಾದುದಾರರು ಬಿ.ಸಿ. ನಡೆಸುತ್ತಿದ್ದರು ಎಂದು ತೋರಿಸಲು ನಾನು ದಾಖಲೆ ಹಾಜರುಪಡಿಸಿಲ್ಲ. ನಾನು ಆದಾಯ ತೆರಿಗೆ ಪಾವತಿದಾರಳಾಗಿರುತ್ತೇನೆ. ನನ್ನ ಆದಾಯ ತೆರಿಗೆ ರಿಟರ್ನ್ಸ್ ವರದಿಯಲ್ಲಿ ಸದರಿ ಬಿ.ಸಿ. ಹಣ ಪ್ರತಿ ತಿಂಗಳು ರೂ.5,000/- ಹಣ ಕಟ್ಟಿದ್ದ ಬಗ್ಗೆ ನಮೂದು ಮಾಡಿಲ್ಲ. ನಾನು ಬಿ.ಸಿ. ಹಣ ಕಟ್ಟಲು ನನ್ನ ಮೇಲಾಧಿಕಾರಿಗಳಾದ ಡಿ.ಡಿ.ಪಿ.ಐ ರವರಿಂದ ಪರವಾನಿಗೆ ಪಡೆದಿಲ್ಲ. ಫಿರ್ಯಾದುದಾರರು ಬಿ.ಸಿ. ನಡೆಸುತ್ತಾರೆ ಎಂದು ನಾನು ಪೋಲಿಸರಿಗೆ ದೂರು ನೀಡಿಲ್ಲ. ಫಿರ್ಯಾದುದಾರರಿಗೆ ನಾನು 10 ಚೆಕ್‌ಗಳನ್ನು ನೀಡಿರುತ್ತೇನೆ, ಅವರು ನನಗೆ ಸದರಿ ಚೆಕ್‌ಗಳನ್ನು ಮರಳಿ ನೀಡಿರುವುದಿಲ್ಲ ಎಂದು ಪೋಲಿಸರಿಗೆ ದೂರು ಸಲ್ಲಿಸಿಲ್ಲ. ಫಿರ್ಯಾದುದಾರರು ಚೆಕ್‌ಗಳನ್ನು ಮರಳಿ ನೀಡದೇ ಇದ್ದಾಗ, ನಾನು ಅವರಿಗೆ ವಕೀಲರ ಮೂಲಕ ನೋಟೀಸು ನೀಡಿ ಅವರ ವಿರುದ್ಧ ಕ್ರಮ ತೆಗೆದುಕೊಂಡಿರುವುದಿಲ್ಲ.

2. ನಾನು ಫಿರ್ಯಾದುದಾರರಿಗೆ ನೀಡಿರುವ ಚೆಕ್‌ಗಳ ನಂಬರ್ ನನಗೆ ಗೊತ್ತಿಲ್ಲ. ಈಗ ಸಾಕ್ಷಿಗೆ ಫಿರ್ಯಾದುದಾರರ ಪರ ವಕೀಲರು ನಿಪಿ-1 ಚೆಕ್ ತೋರಿಸಲಾಗಿ, ಸಾಕ್ಷಿಯು ಸದರಿ ಚೆಕ್ ತನ್ನ ಖಾತೆಯ ಚೆಕ್ ಆಗಿರುತ್ತದೆ ಎಂದು ಹೇಳಿ, ಅದರ ಮೇಲಿರುವ ಸಹಿ ತನ್ನದೇ ಆಗಿರುತ್ತದೆ ಎಂದು ಒಪ್ಪುತ್ತಾರೆ. ಸದರಿ ಚೆಕ್ ಮತ್ತು ಸಹಿಯನ್ನು ಈಗಾಗಲೇ ನಿಪಿ-1 ಮತ್ತು ನಿಪಿ-1(ಎ) ಎಂದು ಗುರುತಿಸಲಾಗಿರುತ್ತದೆ. ಈ ಹಂತದಲ್ಲಿ ಸಾಕ್ಷಿಯು ಮುಂದುವರೆದು ಸದರಿ ಚೆಕ್ ನಾನು ಫಿರ್ಯಾದುದಾರರ ನೀಡಿಲ್ಲ, ಬಿ.ಸಿ. ಹಣದ ಸಲುವಾಗಿ ಕೊಟ್ಟಿದ್ದೆ ಎಂದು ಸ್ವತಃ ನುಡಿಯುತ್ತಾರೆ.

ನಾನು ನಿಪಿ-1ನ್ನು ಬಿ.ಸಿ. ಹಣದ ಸಲುವಾಗಿ ನೀಡಿರುತ್ತೇನೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

3. ನನ್ನ ಗಂಡ ಜಮಖಂಡಿ ಮತ್ತು ಹುನ್ನೂರು ಗ್ರಾಮದ ಹಲವಾರು ಜನರಿಂದ ಸುಮಾರು ರೂ.50,00,000/- ದಿಂದ ರೂ.60,00,000/- ದವರೆಗೆ ಸಾಲ ಮಾಡಿರುತ್ತಾರೆ ಎಂದರೆ ಸರಿಯಲ್ಲ. ಸಾಲ ಕೊಟ್ಟವರು ನನ್ನ ಮನೆಗೆ ಮತ್ತು ನಾನು ಕೆಲಸ ಮಾಡುವ ಶಾಲೆಗೆ ಬಂದು ಸಾಲ ಮರುಪಾವತಿ ಮಾಡುವಂತೆ ಕೇಳುತ್ತಿದ್ದರು ಎಂದರೆ ಸರಿಯಲ್ಲ. ನನ್ನ ಸಂಪೂರ್ಣ ವೇತನ ಸಾಲ ಮರುಪಾವತಿ ಮಾಡುವುದಕ್ಕೆ ಹೋಗುತ್ತಿತ್ತು ಎಂದರೆ ಸರಿಯಲ್ಲ. ನನ್ನ ಮಕ್ಕಳ ವಿದ್ಯಾಭ್ಯಾಸದ ಖರ್ಚಿಗಾಗಿ ಮತ್ತು ಮನೆಯ ಖರ್ಚಿಗಾಗಿ ಫಿರ್ಯಾದುದಾರರಿಂದ ನಾನು ರೂ.7,00,000/- ಹಣ ಕೈಗಡ ಪಡೆದಿದ್ದೆ ಎಂದರೆ ಸರಿಯಲ್ಲ. ಸದರಿ ಕೈಗಡ ಮರುಪಾವತಿಗಾಗಿ ಫಿರ್ಯಾದುದಾರರಿಗೆ ನಾನು ನಿಪಿ-1ನ್ನು ನೀಡಿರುತ್ತೇನೆ ಎಂದರೆ ಸರಿಯಲ್ಲ. ನಿಪಿ-1 ಅಮಾನ್ಯಗೊಂಡ ನಂತರ ಫಿರ್ಯಾದುದಾರರು ನನಗೆ ಹಲವಾರು ಬಾರಿ ಹಣ ಮರಳಿ ನೀಡುವಂತೆ ಕೇಳಿರುತ್ತಾರೆ ಎಂದರೆ ಸರಿಯಲ್ಲ. ನಾನು ಹಾಜರುಪಡಿಸಿರುವ ಎಲ್ಲಾ ದಾಖಲೆಗಳು ಪ್ರಸ್ತುತ ಪ್ರಕರಣಕ್ಕೆ ಯಾವುದೇ ರೀತಿಯಾಗಿ ಸಂಬಂಧ ಇರುವುದಿಲ್ಲ ಎಂದರೆ ಸರಿಯಲ್ಲ. ಫಿರ್ಯಾದುದಾರರ ಹಣವನ್ನು ಮುಳುಗಿಸಬೇಕೆಂಬ ಉದ್ದೇಶದಿಂದ ನಾನು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಮರುವಿಚಾರಣೆ ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯಂತೆ ಬೆರಳಚ್ಚು ಮಾಡಿಸಲಾಯಿತು.)

ಓ.ಹೇ.ಕೆ. ಸರಿ ಅದೆ.

RAJASHEKHAR Digitally signed by RAJASHEKHAR Date: 2026.02.11 18:55:10 +0530

ಪ್ರಧಾನ ಹಿರಿಯ ದಿವಾಣಿ ನ್ಯಾಯಾಧೀಶರು,
ಹಾಗೂ ಜೆ.ಎಮ್.ಎಫ್.ಸಿ. ಜಮಖಂಡಿ.